CPMG/KA/BG-GPO/13/2003-05

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ಪತ್ರಿಕೆ**



| ಭಾಗ - **IVA** | ಬೆಂಗಳೂರು, ಶುಕ್ರವಾರ, ಏಪ್ರಿಲ್ ೩೦, ೨೦೦೪ (ವೈಶಾಖ ೧೦, ಶಕ ವರ್ಷ ೧೯೨೬) | ನಂ. ೫೩೭ |
|---|---|---|



**ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಗ್ರಾಅಪ 569 ಗ್ರಾನೀಸ (2) 03, ದಿನಾಂಕ:29ನೇ ಏಪ್ರಿಲ್ 2004**

ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ಅಧಿನಿಯಮ, 1999 (2003ರ ಕರ್ನಾಟಕ ಅಧಿನಿಯಮ ಸಂಖ್ಯೆ:44) ರ 1ನೇ ಪ್ರಕರಣದ ಉಪ ಉಪ್ರಕರಣ (3)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಅಧಿಸೂಚನೆಯು ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಸದರಿ ಅಧಿನಿಯಮವು ಜಾರಿಗೆ ಬರತಕ್ಕದ್ದೆಂದು ಈ ಮೂಲಕ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ವೀ.ಪ. ಬಳಿಗಾರ**
ಸರ್ಕಾರದ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಅಧಿಸೂಚನೆ**

**ನಂ:ಗ್ರಾಅಪ 569 ಗ್ರಾನೀಸ(2) 03, ದಿನಾಂಕ:29ನೇ ಏಪ್ರಿಲ್ 2004**

ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ಅಧಿನಿಯಮ, 1999 (2003ರ ಕರ್ನಾಟಕ ಅಧಿನಿಯಮ ಸಂಖ್ಯೆ:44)ನೇಯ ಪ್ರಕರಣ 20ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಮಾಡಲು ಉದ್ದೇಶಿಸಿರುವ ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ನಿಯಮಗಳು, 2004ರನ್ನು ಪ್ರಸ್ತಾಪಿಸಿ ಸದರಿ ಪ್ರಕರಣದ 1ನೇ ಉಪ-ಪ್ರಕರಣದಲ್ಲಿ ಅಗತ್ಯಪಡಿಸಿದಂತೆ ಸಾರ್ವಜನಿಕ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ ಹಾಗೂ ಸದರಿ ಕರಡು ನಿಯಮಗಳಿಂದ ಬಾಧಿತರಾಗಲ್ಪಡುವ ವ್ಯಕ್ತಿಗಳಿಂದ ಆಕ್ಷೇಪಣೆ ಹಾಗೂ ಸಲಹೆಗಳನ್ನು ಆಹ್ವಾನಿಸಲಾಗಿದ್ದು, ಈ ಕರಡು ನಿಯಮಗಳನ್ನು ಅಂತಿಮಗೊಳಿಸಲು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ ಹದಿನೈದು ದಿನಗಳ ನಂತರ ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಸೂಚಿಸಲಾಗಿದೆ.

ಸದರಿ ಕರಡು ನಿಯಮಗಳಿಗೆ ಸಂಬಂಧಿಸಿದಂತೆ ಮೇಲೆ ತಿಳಿಸಿದ ಅವಧಿಯೊಳಗಾಗಿ ಯಾವುದೇ ವ್ಯಕ್ತಿಯಿಂಧ ಯಾವುದೇ ಆಕ್ಷೇಪಣೆ ಮತ್ತು ಸಲಹೆಗಳು ಸರ್ಕಾರದಿಂದ ಸ್ವೀಕೃತವಾದಲ್ಲಿ ಅವುಗಳನ್ನು ಪರಿಶೀಲಿಸಲಾಗುವುದು. ಆಕ್ಷೇಪಣೆ ಹಾಗೂ ಸಲಹೆಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಅಂಬೇಡ್ಕರ್ ವೀದಿ, ಬೆಂಗಳೂರು-560 001 ಇವರಿಗೆ ಕಳುಹಿಸಬಹುದು.

**ನಿಯಮಗಳು**

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:** (1) ಈ ನಿಯಮಗಳನ್ನು ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ನಿಯಮಗಳು, 2004 ಎಂದು ಕರೆಯತಕ್ಕದ್ದು.

(2) ಇದು ಸರ್ಕಾರದ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು –** ಈ ನಿಯಮಗಳಲ್ಲಿ ಸಂದರ್ಭಕ್ಕೆ ಅನ್ಯಥಾ ಅಗತ್ಯವಿದ್ದಹೊರತು;

(1) "ಅಧಿನಿಯಮ" ಎಂದರೆ ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ಅಧಿನಿಯಮ, 1999

(2) "ಪ್ರಕರಣ" ಎಂದರೆ ಈ ಅಧಿನಿಯಮದ ಪ್ರಕರಣ

**3. ಬಾವಿ ತೋಡುವುದಕ್ಕೆ ಪ್ರಕರಣ 3ರಡಿ ಅನುಮತಿ ನೀಡುವುದು –** (1) ಪ್ರಕರಣ 3ರ ಉಪ-ಪ್ರಕರಣ (2)ರಡಿ ಬಾವಿ ತೋಡುವುದಕ್ಕೆ ಅನುಮತಿ ಪಡೆಯುವ ಸಲುವಾಗಿ ಅರ್ಜಿಯನ್ನು ನಮೂನೆ-1ರಲ್ಲಿ ಒಂದು ನೂರು ರೂಪಾಯಿ ಶುಲ್ಕ ಪಾವತಿಸುವ ಮೂಲಕ ಸಲ್ಲಿಸತಕ್ಕದ್ದು.

(2) ಉಪ-ನಿಯಮ (1)ರಡಿ ಅನುಮತಿ ನೀಡುವಾಗ ಸಾರ್ವಜನಿಕ ಕುಡಿಯುವ ನೀರಿನ ಮೂಲಗಳ ಬಳಕೆಗೆ ತೊಂದರೆಯಾಗುವುದಿಲ್ಲ ಎನ್ನುವುದನ್ನು ದೃಢಪಡಿಸಿಕೊಳ್ಳತಕ್ಕದ್ದು. ಈ ರೀತಿ ನೀಡುವ ಅನುಮತಿಯು ಮುಂದೆ ಸೃಜಿಸಲಾಗಬಹುದಾದ ಸಾರ್ವಜನಿಕ ಕುಡಿಯುವ ನೀರಿನ ಮೂಲಗಳಿಗೆ ದಕ್ಕೆಯಾಗದಂತೆ ಇಲ್ಲವೆ ಅಂತಹ ಸಂದರ್ಭಗಳಲ್ಲಿ ಅಧಿನಿಯಮದಡಿ ನೀಡಲಾದ ಅನುಮತಿಯನ್ನು ತಾತ್ಕಾಲಿಕವಾಗಿ ಇಲ್ಲವೆ ಶಾಶ್ವತವಾಗಿ ಹಿಂಪಡೆಯುವ ಷರತ್ತಿಗೆ ಒಳಪಟ್ಟಿರುತ್ತದೆ.

**4. ಅತ್ಯಧಿಕವಾಗಿ ಬಳಸಲಾದ ಜಲವಿಭಾಜಕ ಪ್ರದೇಶದಲ್ಲಿ ಬಾವಿ ತೋಡಲು ಅನುಮತಿ ನೀಡುವುದು –** (1) ಅತ್ಯಧಿಕವಾಗಿ ಬಳಸಲಾದ ಜಲವಿಭಾಜಕ ಪ್ರದೇಶದಲ್ಲಿ ಬಾವಿ ತೋಡಲು ಪ್ರಕರಣ 7ರಡಿ ಯುಕ್ತ ಪ್ರಾಧಿಕಾರಕ್ಕೆ ಸಲ್ಲಿಸುವ ಅರ್ಜಿಯು ನಮೂನೆ-2ರಲ್ಲಿರತಕ್ಕದ್ದು ಹಾಗೂ ಅರ್ಜಿಯ ಜೊತೆ ನೂರು ರೂಪಾಯಿಗಳ ಶುಲ್ಕವನ್ನು ಪಾವತಿಸತಕ್ಕದ್ದು.

(2) ಯುಕ್ತ ಪ್ರಾಧಿಕಾರವು ನಿಯಮದಡಿ ಬಾವಿ ತೋಡಲು ಅನುಮತಿ ನೀಡುವ ಸಂಬಂಧ ಸ್ವೀಕರಿಸಿದ ಅರ್ಜಿಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಅನುಮತಿ ನೀಡಲು ಅಥವಾ ತಿರಸ್ಕರಿಸಲು ಅಧಿಕಾರ ಹೊಂದಿರುತ್ತದೆ. ಈ ಅಧಿಕಾರವು ಕೆಳಕಂಡ ಷರತ್ತು ಮತ್ತು ನಿರ್ಬಂಧನೆಗಳಿಗೆ ಒಳಪಟ್ಟಿರುತ್ತದೆ.

(i) ವೈಯಕ್ತಿಕ ಕುಡಿಯುವ ನೀರಿನ ಸಲುವಾಗಿ ಅಲ್ಲದೆ ಬೇರೆ ಚಟುವಟಿಕೆಗಳಿಗೆ ಉಪಯೋಗಿಸುವುದನ್ನು ಹಾಗೂ ಸಾರ್ವಜನಿಕ ಕುಡಿಯುವ ನೀರಿನ ಸಮಸ್ಯೆಯು ತಲೆದೋರಿದಾಗ ನೇರವಾಗಿ ಬಾವಿ ಮಾಲೀಕರು ಹಣ ಪಡೆದು ನೀರು ವಿತರಿಸುವುದನ್ನು ನಿಷೇದಿಸಬಹುದು ಮತ್ತು ಸದರಿ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುವವರೆಗೆ ಆ ಬಾವಿ ನೀರನ್ನು ಸಾರ್ವಜನಿಕ ಹಿತದೃಷ್ಟಿಯ ಸಲುವಾಗಿ ಬಳಸತಕ್ಕದ್ದೆಂದು ಆದೇಶಿಸಬಹುದು.

(ii) ಈ ಅಧಿನಿಯಮ ಅಥವಾ ನಿಯಮದ ಉಲ್ಲಂಘನೆ ಮಾಡಿದಂತ ವ್ಯಕ್ತಿಗೆ ಸೇರಿದ ಕುಡಿಯುವ ನೀರಿನ ತೆರೆದ ಬಾವಿ ಅಥವಾ ಬೋರ್‌ವೆಲ್‌ಗಳ ವಿದ್ಯುತ್ ಸಂಪರ್ಕವನ್ನು ತಾತ್ಕಾಲಿಕವಾಗಿ ತೆಗೆದುಹಾಕಲು ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ಆದೇಶಿಸಬಹುದು.

**5. ಪರಿಹಾರ ಸಂದಾಯ ಸಲುವಾಗಿ ಅರ್ಜಿ:** (1) ಪ್ರಕರಣ 12ರಡಿ ಪರಿಹಾರ ಕೋರಿ ಯುಕ್ತ ಪ್ರಾಧಿಕಾರಕ್ಕೆ ಮಾಡಿದ ಅರ್ಜಿಯನ್ನು ನಮೂನೆ 3ರಲ್ಲಿ ಸಲ್ಲಿಸತಕ್ಕದ್ದು ಮತ್ತು ಈ ಅರ್ಜಿ ಜೊತೆ ನೂರು ರೂಪಾಯಿಗಳ ಶುಲ್ಕವನ್ನು ಪಾವತಿಸತಕ್ಕದ್ದು.

(2) ಪರಿಹಾರ ಹಣ ಪಾವತಿಸುವ ಬಗ್ಗೆ ಪ್ರತ್ಯೇಕ ಲೆಕ್ಕವನ್ನು ನಿಯಮನುಸಾರ ನಿರ್ವಹಿಸತದ್ದಕ್ಕು. ಪರಿಹಾರ ಹಣವನ್ನು ಕ್ರಾಸ್ ಚೆಕ್ ಮೂಲಕವೇ ಪಾವತಿ ಮಾಡತಕ್ಕದ್ದು ಹಾಗೂ ಈ ರೀತಿ ಪರಿಹಾರ ಪಡೆದವರಿಂದ ಸ್ವೀಕೃತಿ ಪಡೆಯತಕ್ಕದ್ದು.

**6. ಅಪೀಲುಗಳು –** (1) ಈ ಅಧಿನಿಯಮದ ಯಾವುದೇ ಉಪಬಂಧದಡಿ ಡೆಪ್ಯುಟಿ ಕಮೀಷನರ್ ಅಲ್ಲದ ಇತರ ಯಾವುದೊಬ್ಬ ಯುಕ್ತ ಪ್ರಾಧಿಕಾರ ಆದೇಶ ಮಾಡಿದ್ದಲ್ಲಿ ಅಂಥ ಆದೇಶದ ವಿರುದ್ಧ ಅಪೀಲನ್ನು ಡೆಪ್ಯುಟಿ ಕಮೀಷನರಿಗೂ ಹಾಗೂ ಆದೇಶವನ್ನು ಡೆಪ್ಯುಟಿ ಕಮೀಷನರ್ ಮಾಡಿದ್ದಲ್ಲಿ ಅಪೀಲನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ ಇವರಿಗೂ ಸಲ್ಲಿಸತಕ್ಕದ್ದು.

(2) ಅಪೀಲು ಬಗ್ಗೆ ಯಾವುದೇ ತೀರ್ಮಾನ ತೆಗೆದುಕೊಳ್ಳುವ ಮೊದಲು ಅಪೀಲು ಪ್ರಾಧಿಕಾರವು ಭೂ ವಿಜ್ಞಾನ ಇಲಾಖೆಯ ಭೂವಿಜ್ಞಾನಿ ಶ್ರೇಣಿಗೆ ಕಡಿಮೆಯಿಲ್ಲದ ಶ್ರೇಣಿಯ ಅಧಿಕಾರಿಯ ಅಭಿಪ್ರಾಯವನ್ನು ಪಡೆದುಕೊಂಡು ಅಂತಹ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು.

**7. ನೋಟೀಸುಗಳು –** ಪ್ರಕರಣ 19ರಡಿ ಈ ಅಧಿನಿಯಮದಡಿ ಮಾಡಲಾದ ಯಾವುದೇ ಆದೇಶದಡಿ ಯಾವುದೇ ನೋಟೀಸು ಅಥವಾ ಇತರ ದಸ್ತಾವೇಜನ್ನು ಯಾವ ವ್ಯಕ್ತಿಯ ಹೆಸರಿಗೆ ಬರೆಯಲಾಗಿದೆಯೋ ಆ ವ್ಯಕ್ತಿಗೆ 15 ದಿನ ಮುಂಚಿತವಾಗಿ ಜಾರಿ ಮಾಡಿ ಅದರ ಸ್ವೀಕೃತಿಯನ್ನು ಪಡೆಯತಕ್ಕದ್ದು

**ನಮೂನೆ – 1**

ಬಾವಿ ತೋಡುವುದಕ್ಕೆ ಅನುಮತಿಗಾಗಿ ಅರ್ಜಿ

(ನಿಯಮ 3ನ್ನು ನೋಡುವುದು)

**ನಮೂನೆ – 2**

ಅತ್ಯಧಿಕ ಬಳಸಲಾದ ಜಲವಿಭಾಜಕ ಪ್ರದೇಶದಲ್ಲಿ ಬಾವಿ ತೋಡಲು ಅನುಮತಿಗಾಗಿ ಅರ್ಜಿ

(ನಿಯಮ 4ನ್ನು ನೋಡುವುದು)

**ನಮೂನೆ – 3**

ಪರಿಹಾರ ಸಂದಾಯ ಸಲುವಾಗಿ ಅರ್ಜಿ

(ನಿಯಮ 5ನ್ನು ನೋಡುವುದು)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ವೀ.ಪ. ಬಳಿಗಾರ**

ಸರ್ಕಾರದ ಕಾರ್ಯದರ್ಶಿಗಳು

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

## ನಮೂನೆ - (1)

### ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ಅಧಿನಿಯಮ 1999/2003ರ ನಿಯಮ 3ರ ರೀತ್ಯಾ ಬಾವಿ ಕೊರೆಯಲು / ತೋಡಲು ಅನುಮತಿ ಕೋರಿ ಅರ್ಜಿ

(1) ಅರ್ಜಿದಾರರ ಹೆಸರು :

(2) ತಂದೆ / ಗಂಡನ ಹೆಸರು :

(3) ಪೂರ್ಣ ವಿಳಾಸ :

(4) ವೃತ್ತಿ :

(5) ಒಟ್ಟು ಕುಟುಂಬದ ಸದಸ್ಯರ ಸಂಖ್ಯೆ :

(6) ಕುಟುಂಬದ ಒಟ್ಟು ವಾರ್ಷಿಕ ಆದಾಯ :

(7) ಕೊಳವೆ ಬಾವಿ ಕೊರೆಯಿಸುವ / ತೆರೆದಬಾವಿ ತೋಡುವ ಉದ್ದೇಶ :

(ದಾಖಲೆ ಪತ್ರಗಳ ಪ್ರತಿ) ಸ್ಥಳ: ಸರ್ವೆ ನಂ: ಖಾತಾ ನಂ:

(8) ಹಾಲಿಯಿರುವ ಸಾರ್ವಜನಿಕ ಕುಡಿಯುವ ನೀರು ಪೂರೈಕೆಯ :
ಕೊಳವೆ ಬಾವಿಯಿಂದ ಎಷ್ಟು ಅನತಿ ದೂರದಲ್ಲಿ ಬಾವಿ
ತೋಡಲು ಪ್ರಸ್ತಾಪಿಸಲಾಗಿದೆ.

(9) ಸದರಿ ಪ್ರದೇಶದಲ್ಲಿ ಕಳೆದ 3 ವರ್ಷಗಳಲ್ಲಿನ ಮಳೆಯ ಪ್ರಮಾಣ:
(ಸರ್ಕಾರಿ ಧೃಢೀಕರಣದೊಂದಿಗೆ)

(10) ಉದ್ದೇಶಿತ ಕೊಳವೆ / ತೆರೆದ ಬಾವಿ ನಿಷೇಧಿತ ಪ್ರದೇಶದ :
ವ್ಯಾಪ್ತಿಗೆ ಬರುವುದೇ?

(11) ಉದ್ದೇಶಿತ ಕೊಳವೆ ಬಾವಿಗೆ ಅನುಮತಿ ನೀಡಿದಲ್ಲಿ, ತದನಂತರ:
ಸದರಿ ಜಲಮೂಲದ ಬಳಿ (500 ಮೀಟರ್ ವ್ಯಾಪ್ತಿಯೊಳಗೆ)
ಸಾರ್ವಜನಿಕ ಕೊಳವೆ ಬಾವಿ ತೋಡಲು ಆಕ್ಷೇಪಣೆಯಿದೆಯೇ?

(12) ಪ್ರಸ್ತಾವಿತ ಕೊಳವೆ ಬಾವಿ ತೆಗೆಯುವುದರಿಂದ ಇತರೆ ಖಾಸಗಿ ಕೊಳವೆ:
ಬಾವಿಗಳಿಗೆ ದಕ್ಕೆಯಾಗುವುದಿಲ್ಲವೆಂಬ ಬಗ್ಗೆ ಸ್ಥಳೀಯ
(ಅಧಿನಿಯಮದಡಿ ಗೊತ್ತು ಪಡಿಸಲಾದ ಯುಕ್ತ ಪ್ರಾಧಿಕಾರದ /
ಅಧಿಕಾರಿಗಳು) ಅದಿಕಾರಿಗಳಿಂದ ಧೃಢೀಕರಣ ಪತ್ರ.

(13) ನಿಗದಿತ ಶುಲ್ಕ ಪಾವತಿಸಲಾಗಿದೆಯೇ? ರಸೀದಿ ನಂ. :
(ಪ್ರತಿ ಲಗತ್ತಿಸಬೇಕು) ದಿನಾಂಕ :

(14) ಅಧಿನಿಯಮ 1999/2003– 8/9ರ ಪ್ರಕಾರ ಸದರಿ ಬಾವಿಯನ್ನು :
ಸಾರ್ವಜನಿಕ ಹಿತಾಸಕ್ತಿಯಿಂದ ವಶಪಡಿಸಿಕೊಳ್ಳಲು ಅಭ್ಯಂತರವಿದೆಯೇ?

ಸ್ಥಳ: ಅರ್ಜಿದಾರರ ಸಹಿ

ದಿನಾಂಕ:

## ನಮೂನೆ - (2)

**ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ಅಧಿನಿಯಮ 1999/2003ರ ಪ್ರಕರಣ(7), ನಿಯಮ 4ರ ರೀತ್ಯಾ ಅತ್ಯಧಿಕ ಜಲವಿಭಾಜಕ ಪ್ರದೇಶದಲ್ಲಿ ಬಾವಿತೋಡಲು / ಕೊರೆಯಲು ಅನುಮತಿ ಕೋರಿ ಅರ್ಜಿ**

(1) ಅರ್ಜಿದಾರರ ಹೆಸರು :

(2) ತಂದೆ / ಗಂಡನ ಹೆಸರು :

(3) ಪೂರ್ಣ ವಿಳಾಸ :

(4) ವೃತ್ತಿ :

(5) ಒಟ್ಟು ಕುಟುಂಬದ ಸದಸ್ಯರ ಸಂಖ್ಯೆ :

(6) ಕುಟುಂಬದ ಒಟ್ಟು ವಾರ್ಷಿಕ ಆದಾಯ :

(7) ಕೊಳವೆ ಬಾವಿ ಕೊರೆಯಿಸುವ / ತೆರೆದಬಾವಿ ತೋಡುವ ಉದ್ದೇಶ :

(ದಾಖಲೆ ಪತ್ರಗಳ ಪ್ರತಿ) ಸ್ಥಳ: ಸರ್ವೆ ನಂ: ಖಾತಾ ನಂ:

(8) ಹಾಲಿಯಿರುವ ಸಾರ್ವಜನಿಕ ಕುಡಿಯುವ ನೀರು ಪೂರೈಕೆಯ : ಕೊಳವೆ ಬಾವಿಯಿಂದ ಎಷ್ಟು ಅನತಿ ದೂರದಲ್ಲಿ ಬಾವಿ ತೋಡಲು ಪ್ರಸ್ತಾಪಿಸಲಾಗಿದೆ.

(9) ಸದರಿ ಪ್ರದೇಶದಲ್ಲಿ ಕಳೆದ 3 ವರ್ಷಗಳಲ್ಲಿನ ಮಳೆಯ ಪ್ರಮಾಣ: (ಸರ್ಕಾರಿ ಧೃಢೀಕರಣದೊಂದಿಗೆ)

(10) ಉದ್ದೇಶಿತ ಕೊಳವೆ / ತೆರೆದ ಬಾವಿ ನಿಷೇಧಿತ ಪ್ರದೇಶದ : ವ್ಯಾಪ್ತಿಗೆ ಬರುವುದೇ?

(10)'A' ಉದ್ದೇಶಿತ ಕೊಳವೆ / ತೆರೆದ ಬಾವಿ ರಾಜ್ಯದ ಗಣಿ ಮತ್ತು : ಭೂವಿಜ್ಞಾನ ಇಲಾಖೆ ಘೋಷಿಸಿರುವ ಕ್ಲಿಷ್ಟಕರ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವುದೇ?

(10) 'B' ಭೂವಿಜ್ಞಾನಿಗಳಿಂದ ಪಡೆದಿರುವ ಇತ್ತೀಚಿನ ವರದಿ :

(11) ಉದ್ದೇಶಿತ ಕೊಳವೆ ಬಾವಿಗೆ ಅನುಮತಿ ನೀಡಿದಲ್ಲಿ, ತದನಂತರ: ಸದರಿ ಜಲಮೂಲದ ಬಳಿ (500 ಮೀಟರ್ ವ್ಯಾಪ್ತಿಯೊಳಗೆ) ಸಾರ್ವಜನಿಕ ಕೊಳವೆ ಬಾವಿ ತೋಡಲು ಆಕ್ಷೇಪಣೆಯಿದೆಯೇ?

(12) ಪ್ರಸ್ತಾವಿತ ಕೊಳವೆ ಬಾವಿ ತೆಗೆಯುವುದರಿಂದ ಇತರೆ ಖಾಸಗಿ ಕೊಳವೆ: ಬಾವಿಗಳಿಗೆ ದಕ್ಕೆಯಾಗುವುದಿಲ್ಲವೆಂಬ ಬಗ್ಗೆ ಸ್ಥಳೀಯ (ಅಧಿನಿಯಮದಡಿ ಗೊತ್ತು ಪಡಿಸಲಾದ ಯುಕ್ತ ಪ್ರಾಧಿಕಾರದ / ಅಧಿಕಾರಿಗಳು) ಅದಿಕಾರಿಗಳಿಂದ ಧೃಢೀಕರಣ ಪತ್ರ.

(13) ನಿಗದಿತ ಶುಲ್ಕ ಪಾವತಿಸಲಾಗಿದೆಯೇ? ರಸೀದಿ ನಂ. : (ಪ್ರತಿ ಲಗತ್ತಿಸಬೇಕು) ದಿನಾಂಕ :

(14) ಅಧಿನಿಯಮ 1999/2003- 8/9ರ ಪ್ರಕಾರ ಸದರಿ ಬಾವಿಯನ್ನು : ಸಾರ್ವಜನಿಕ ಹಿತಾಸಕ್ತಿಯಿಂದ ವಶಪಡಿಸಿಕೊಳ್ಳಲು ಅಭ್ಯಂತರವಿದೆಯೇ?

ಸ್ಥಳ:
ದಿನಾಂಕ:

ಅರ್ಜಿದಾರರ ಸಹಿ

## ನಮೂನೆ - (3)

### ಕರ್ನಾಟಕ ಅಂತರ್ಜಲ ಸಂರಕ್ಷಣೆ ಅಧಿನಿಯಮ 1999/2003ರ ಪ್ರಕರಣ 12 ನಿಯಮ 5 ರನ್ವಯ ಪರಿಹಾರ ಕೋರಿ ಅರ್ಜಿ

(1) ಅರ್ಜಿದಾರರ ಹೆಸರು :

(2) ತಂದೆ / ಗಂಡನ ಹೆಸರು :

(3) ಪೂರ್ಣ ವಿಳಾಸ :

(4) ವೃತ್ತಿ :

(5) ಒಟ್ಟು ಕುಟುಂಬದ ಸದಸ್ಯರ ಸಂಖ್ಯೆ :

(6) ಕುಟುಂಬದ ಒಟ್ಟು ವಾರ್ಷಿಕ ಆದಾಯ :

(7) ಖಾಸಗಿ ಸ್ವತ್ತಿನ ಸರ್ವೆ ನಂ. ಅಧೀಕೃತ ದಾಖಲೆ ಸಹಕಾರಿ:
ಸಂಘಗಳಿಂದ ಸಾಲಪಡೆದು ಬಾವಿ ನಿರ್ಮಾಣ ಮಾಡಿದ್ದಲ್ಲಿ
ಅಧಿಕೃತ ದಾಖಲೆಗಳು

(8) ಯುಕ್ತ ಪ್ರಾಧಿಕಾರವು ಘೋಷಿಸಿದ ಪ್ರದೇಶದ ವ್ಯಾಪ್ತಿಗೆ ಬರುವುದೇ:
ಹಾಗೂ ಬಾವಿ ವಶಪಡಿಸಿಕೊಂಡ ಆದೇಶದ ಧೃಡೀಕೃತ ಪ್ರತಿ.

(9) ಹಾಲಿಯಿರುವ ಕೊಳವೆ ಬಾವಿ / ತೆರೆದ ಬಾವಿ: ವರ್ಷ: ತಿಂಗಳು: ಆಳ:
ಯಾವಾಗ ತೆಗೆಯಲಾಗಿದೆ
ಸವಕಳಿಯಿಲ್ಲದಿದ್ದಲ್ಲಿ ಸೂಕ್ತ ಧೃಢೀಕರಣ ಪತ್ರ
(ಸ್ಥಳೀಯ ಭೂವಿಜ್ಞಾನಿಗಳು ಹಾಗೂ ಜಿಲ್ಲಾ
ಪಂಚಾಯತ್ ಇಂಜಿನಿಯರಿಂಗ್ ವಿಭಾಗ
ಅಭಿಯಂತರರಿಂದ ಪಡೆದು ಲಗತ್ತಿಸಬೇಕು)

ಬಾವಿ ತೆಗೆದಾಗ ದಾಖಲೆಯಾದ ಇಳುವರಿ ......................
ಪ್ರತಿವರ್ಷ 10% ರಂತೆ ಸವಕಳಿ ನಂತರ ಹಾಲಿ ಇಳುವರಿ...............

(10) ಹಾಲಿಯಿರುವ ಕೊಳವೆ ಬಾವಿ / ತೆರೆದಬಾವಿಯನ್ನು :
ಯಾವ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ.

(11) ಸದರಿ ಬಾವಿಯ ಆಧಾರದಿಂದ ಕೃಷಿ / ವಾಣಿಜ್ಯ :
ವಹಿವಾಟಿನಿಂದ ಬರುವ ಆದಾಯ

(12) ಒಟ್ಟು ಆದಾಯದ ಮೇಲೆ ಘೋಷಣೆಯಾದ ವರಮಾನ :
ಪಾವತಿಸಿದ ತೆರಿಗೆಯ ವಿವರಗಳು
ಆದಾಯ ತೆರಿಗೆ ಪಾವತಿ ಸಂಖ್ಯೆ: ದಿನಾಂಕ:

(13) ಸದರಿ ಬಾವಿ / ಜಲಮೂಲದ ಅವಶ್ಯಕತೆ ಕುರಿತಂತೆ ಸ್ಥಳೀಯ :
ಪಂಚಾಯತ್ / ಪ್ರಾಧಿಕಾರದ ಠರಾವು ಲಗತ್ತಿಸಲಾಗಿದೆಯೇ?

(14) ನಿರೀಕ್ಷಿತ ಪರಿಹಾರದ ಮೊಬಲಗು :

(15) ನಿಗದಿತ ಶುಲ್ಕ ಪಾವತಿಸಲಾಗಿದೆಯೇ? :
ರಸೀದಿ ನಂ.: ದಿನಾಂಕ:

ಸ್ಥಳ:
ದಿನಾಂಕ:

ಅರ್ಜಿದಾರರ ಸಹಿ

## ಅಧಿಸೂಚನೆ

**ನಂ:ಗ್ರಾಅಪ 569 ಗ್ರಾನೀಸ(2) 03, ದಿನಾಂಕ:29ನೇ ಏಪ್ರಿಲ್ 2004**

ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ವಿಧೇಯಕ 1999/2003ರ ಅಧಿಸೂಚನೆ ದಿನಾಂಕ:27ನೇ ಅಕ್ಟೋಬರ್ 2003 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಯಾಗಿರುತ್ತದೆ. ಸದರಿ ಅಧಿಸೂಚನೆಯಲ್ಲಿ ಪ್ರಕರಣ 2ರ ಉಪ ಪ್ರಕರಣ (1)ರಲ್ಲಿ ಹೇಳಿರುವ ಯುಕ್ತ ಪ್ರಾಧಿಕಾರದಡಿ ಸಂಬಂಧಿಸಿದ ತಾಲ್ಲೂಕು ಪಂಚಾಯತ್‌ನ "ಕಾರ್ಯನಿರ್ವಾಹಕ ಅಧಿಕಾರಿ"ಯನ್ನು ಅಳವಡಿಸಿದೆ.

ಅತ್ಯಧಿಕ ಬಳಸಲಾದ ಜಲವಿಭಾಜಕ ಪ್ರದೇಶದ ಪಟ್ಟಿಯನ್ನು ಸರ್ಕಾರದ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಘೋಷಿಸಿರುವ ರೀತ್ಯ ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ವಿಧೇಯಕ 1999/2003ರ ಪ್ರಕರಣ 2 ರ ಖಂಡ (6)ರ ಪ್ರಕಾರ ಈ ಅಧಿಸೂಚನೆ ಯೊಂದಿಗಿನ ಅನುಬಂಧ- 2 ರಲ್ಲಿ ಪ್ರಕಟಿಸಲಾಗಿದೆ.

ಕರ್ನಾಟಕ ಅಂತರ್ಜಲ ಸಂರಕ್ಷಣೆ ವಿಧೇಯಕ 1999/2003 ರ ಪ್ರಕರಣ 8 & 9ಕ್ಕೆ ಸಂಬಂಧಿಸಿದಂತೆ ವಶಪಡಿಸಿಕೊಳ್ಳಲಾದ ಖಾಸಗಿ ಬಾವಿಗಳಿಂದ ನೀರನ್ನು ತೆಗೆಯಲು ನಿಷೇದಿಸುವ ಮತ್ತು ಸಾರ್ವಜನಿಕ ಹಿತಾಸಕ್ತಿಯಿಂದ ಬಾವಿಯನ್ನು ಮುಚ್ಚುವ ನಿಶ್ಚಿತ ಅವಧಿಯನ್ನು ಸ್ಥಳೀಯ ಅಂತರ್ಜಲ ಮಟ್ಟ ಸುಧಾರಣೆ ಹಾಗೂ ಸಾರ್ವಜನಿಕ ನೀರು ಪೂರೈಕೆ ವ್ಯವಸ್ಥೆ ಮೇಲೆ, ಭೂ ವಿಜ್ಞಾನಿಗಳ ಸಲಹೆ ಆಧರಿಸಿ ಯುಕ್ತ ಪ್ರಾಧಿಕಾರವು ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ವೀ.ಪ. ಬಳಿಗಾರ**
ಸರ್ಕಾರದ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಅನುಬಂಧ - 2**

**ಕರ್ನಾಟಕ ರಾಜ್ಯದಲ್ಲಿ ಕ್ಲಿಷ್ಟಕರವೆಂದು ಪರಿಗಣಿಸಲಾದ ತಾಲ್ಲೂಕುಗಳಲ್ಲಿ ಅಂತರ್ಜಲ ಅಭಿವೃದ್ಧಿಯ ಸ್ಥಾನ- ಮಾನ**

| ಕ್ರ. ಸಂ. | ಜಿಲ್ಲೆಯ ಹೆಸರು | ಕಪ್ಪು ತಾಲ್ಲೂಕು > 85% | ಬೂದು ತಾಲ್ಲೂಕು >65 ರಿಂದ <85% | ಮಧ್ಯಂತರ 50 ರಿಂದ 65% |
|---|---|---|---|---|
| 1 | ಬೆಂಗಳೂರು ನಗರ | 1. ಆನೇಕಲ್<br>2. ಬೆಂಗಳೂರು ಉತ್ತರ<br>3. ಬೆಂಗಳೂರು ದಕ್ಷಿಣ | | |
| 2 | ಬೆಂಗಳೂರು ಗ್ರಾಮಾಂತರ | 1. ಚನ್ನಪಟ್ಟಣ<br>2. ದೇವನಹಳ್ಳಿ<br>3. ಹೊಸಕೋಟೆ | 1. ದೊಡ್ಡಬಳ್ಳಾಪುರ<br>2. ರಾಮನಗರ | |
| 3 | ಬೆಳಗಾಂ | 1. ಚಿಕ್ಕೋಡಿ<br>2. ಹುಕ್ಕೇರಿ | 1. ಅಥಣಿ<br>2. ಬೈಲಹೊಂಗಲ | 1. ಬೆಳಗಾಂ<br>2. ಗೋಕಾಕ್<br>3. ರಾಯಭಾಗ್<br>4. ಸೌಂದತ್ತಿ |
| 4 | ಬಳ್ಳಾರಿ | | 1. ಹಗರಿಬೊಮ್ಮನಹಳ್ಳಿ | 1. ಹೆಚ್. ಹಡಗಲಿ<br>2. ಕೂಡ್ಲಿಗಿ |
| 5 | ಬೀದರ್ | | 1. ಬೀದರ್ | 1. ಹುಮುನಾಬಾದ್ |
| 6 | ಬಿಜಾಪುರ | 1. ಇಂಡಿ | 1. ಬಾಗೇವಾಡಿ<br>2. ಬಿಜಾಪುರ | 1. ಮುಧೋಳ<br>2. ಜಮಖಂಡಿ<br>3. ಸಿಂಧನೂರು |
| 7 | ಚಿತ್ರದುರ್ಗ | | 1. ಚಳ್ಳಕೆರೆ<br>2. ಚಿತ್ರದುರ್ಗ | 1. ಹಿರಿಯೂರು<br>2. ಜಗಳೂರು<br>3. ಮೊಳಕಾಲ್ಮೂರು |
| 8 | ದಕ್ಷಿಣ ಕನ್ನಡ | 1. ಬಂಡವಾಳ<br>2. ಸೂಳ್ಯ | 1. ಬೆಳ್ತಂಗಡಿ | 1. ಪುತ್ತೂರು |
| 9 | ಹಾಸನ | 1. ಚನ್ನರಾಯಪಟ್ಟಣ | 1. ಅರಸೀಕೆರೆ | |

| | | | | |
|---|---|---|---|---|
| 10 | ಕೋಲಾರ | 1. ಚಿಕ್ಕಬಳ್ಳಾಪುರ<br>2. ಕೋಲಾರ<br>3. ಮಾಲೂರು | 1. ಚಿಂತಾಮಣಿ<br>2. ಗೌರಿಬಿದನೂರು<br>3. ಮುಳಬಾಗಿಲು<br>4. ಶಿಡ್ಲಘಟ್ಟ<br>5. ಶ್ರೀನಿವಾಸಪುರ | 1. ಬಾಗೇಪಲ್ಲಿ<br>2. ಬಂಗಾರಪೇಟೆ<br>3. ಗುಡಿಬಂಡೆ |
| 11 | ಕೊಪ್ಪಳ | | 1. ಕುಷ್ಟಗಿ | 1. ಕೊಪ್ಪಳ<br>2. ಯಲಬುರ್ಗಿ |
| 12 | ತುಮಕೂರು | 1. ಗುಬ್ಬಿ<br>2. ಮಧುಗಿರಿ<br>3. ತಿಪಟೂರು<br>4. ತುಮಕೂರು<br>5. ತುರುವೇಕೆರೆ | 1. ಕೊರಟಗೆರೆ<br>2. ಕುಣಿಗಲ್<br>3. ಶಿರಾ | 1. ಚಿಕ್ಕನಾಯಕನಹಳ್ಳಿ<br>2. ಪಾವಗಡ |
| 13 | ದಾವಣಗೆರೆ | | | 1. ದಾವಣಗೆರೆ<br>2. ಚನ್ನಗಿರಿ |
| 14 | ಬಾಗಲಕೋಟೆ | | | 1. ಬಾಗಲಕೋಟೆ |
| 15 | ಚಾಮರಾಜನಗರ | 1. ಕೊಳ್ಳೇಗಾಲ | 1. ಚಾಮರಾಜನಗರ | 1. ಯಳಂದೂರು |
| 16 | ಹಾವೇರಿ | | | 1. ಹಿರೇಕೆರೂರು<br>2. ರಾಣಿಬೆನ್ನೂರು<br>3. ಹಾವೇರಿ |
| 17 | ಗದಗ | | | 1. ನರಗುಂದ |

ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು.